**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ. ನ್ಯಾಯಾಲಯ, ಕುಣಿಗಲ್</u>**

**ಸಿ.ಸಿ.1094/2018**

| | |
|---|---|
| ಸಾಕ್ಷಿದಾರರ ಹೆಸರು | : ಶ್ರೀನಿವಾಸಯ್ಯ |
| ತಂದೆಯ ಹೆಸರು | : ಸಂಪಣ್ಣ |
| ವಯಸ್ಸು | : 62 ವರ್ಷ |
| ಉದ್ಯೋಗ | : ನಿವೃತ್ತ ಪಿ.ಎಸ್.ಐ |
| ವಾಸ | : ಬೇವಿನಳ್ಳಿ ಪಾಳ್ಯ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು. |

**<u>ಸಾಕ್ಷಿಯನ್ನು ದಿನಾಂಕ:17.01.2026 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

ನಾನು 2018 ರಿಂದ 2020 ರವರೆಗೆ ಕುಣಿಗಲ್ ಪೊಲೀಸ್ ಠಾಣೆ ಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 08.04.2018 ರಂದು ಠಾಣಾಧಿಕಾರಿ ಕರ್ತವ್ಯದಲ್ಲಿದ್ದಾಗ ಸಂಜೆ 8.30ರ ವೇಳೆಗೆ ಚಾಸಾ.1 ರವರು ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಸಲ್ಲಿಸಿದ ಪ್ರಥಮ ವರ್ತಮಾನ ವರದಿಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಯು ಗುರುತಿಸಿದ ಪ್ರಥಮ ವರ್ತಮಾನ ವರದಿಯನ್ನು **ನಿಪಿ.3** ಎಂದು, ಅದರಲ್ಲಿರುವ ಸಹಿಯನ್ನು **ನಿಪಿ.3(ಎ)** ಎಂದು ಗುರುತಿಸಲಾಗಿದೆ. ಸಾಕ್ಷಿಯು ಗುರುತಿಸಿದ ದೂರನ್ನು ಈಗಾಗಲೇ **ನಿಪಿ.1** ಎಂದು, ಅದರಲ್ಲಿರುವ ಸಹಿಯನ್ನು **ನಿಪಿ.1(ಬಿ)** ಎಂದು ಗುರುತಿಸಲಾಗಿದೆ.

ಮರುದಿನ ಬೆಳಿಗ್ಗೆ ಚಾಸಾ.1 ರವರು ಕೃತ್ಯ ನಡೆದ ಸ್ಥಳ ತೋರಿಸಿದ ಮೇರೆಗೆ ಬೆಳಿಗ್ಗೆ

8.15 ರಿಂದ 9.15 ಗಂಟೆ ಸಮಯದಲ್ಲಿ ಚಾಸಾ.1,4 ಮತ್ತು 5 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಚಾಸಾ.1 ರಿಂದ 3 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ದಿನಾಂಕ 23.05.2018 ರಂದು ಘಟನಾ ಸ್ಥಳದ ಪಹಣಿಯನ್ನು ತಾಲ್ಲೂಕು ಕಚೇರಿಯಿಂದ ಪಡೆದಿರುತ್ತೇನೆ. ಆರೋಪಿತರು ತಲೆ ಮರೆಸಿಕೊಂಡಿದ್ದರಿಂದ, ಆರೋಪಿತರ ವಿರುದ್ದ ಕಲಂ 427 ಭಾರತ ದಂಡ ಸಂಹಿತೆ ಹೊರತುಪಡಿಸಿ ಉಳಿದ ಕಲಂಗಳಿಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃಆರೋಪಿ ಪರ ಶ್ರೀ. ಕೆ ಜಿ ಪಿ ವಕೀಲರಿಂದಃ**

ನಿಪಿ.1ನ್ನು ತನ್ನ ಮಗನಿಗೆ ತಿಳಿಸಿ ವಿಚಾರ ಮಾಡಿ ತಡವಾಗಿ ನೀಡಿದ್ದೇನೆ ಎಂದು ಚಾಸಾ.1 ರವರು ತಿಳಿಸಿದ್ದರು. ದೂರನ್ನು ನೀಡಲು 4 ದಿನ ತಡವಾದ ಬಗ್ಗೆ ಚಾಸಾ.1 ರವರ ಮಗನ ಹೇಳಿಕೆಯನ್ನು ಪಡೆದಿರುವುದಿಲ್ಲ. ಸರ್ವೆ ನಂ.12/4ರಲ್ಲಿ ಎಷ್ಟು ಪೋಡು ಆಗಿದೆ ಎಂದು ವಿಚಾರಿಸಿಲ್ಲ. ಸದರಿ ಸರ್ವೆ ನಂ.12/4ರಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಸದರಿ ಆಸ್ತಿಯ ಬೇರೆ ಯಾವುದೇ ಕಂದಾಯ ದಾಖಲೆಗಳನ್ನು ಪಡೆದಿರುವುದಿಲ್ಲ. ನನ್ನ ತನಿಖೆಯಲ್ಲಿ ಪಹಣಿಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಈ ಪ್ರಕರಣದ ದಿನಾಂಕದ ವೇಳೆಗೆ ವಿಧಾನಸಭಾ ಚುನಾವಣೆ ಇತ್ತು ಎಂದರೆ ಸಾಕ್ಷಿಯು ತನಗೆ ನೆನಪಿಲ್ಲವೆಂದು ನುಡಿಯುತ್ತಾರೆ. ಚಾಸಾ.1

ಮತ್ತು 2 ರವರು ಬಿಜೆಪಿ ಪಕ್ಷಕ್ಕೆ ಸೇರಿದವರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಆರೋಪಿತರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸರ್ವೆ ನಂ.12/4ರ ಕುರಿತು ಯಾವುದೇ ಸಿವಿಲ್ ವ್ಯಾಜ್ಯ ಇದೆ ಎಂದು ನಾನು ವಿಚಾರಣೆ ಮಾಡಿರಲಿಲ್ಲ. ಸದರಿ ಆಸ್ತಿಯ ಚೆಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು, ತಾನು ಸರ್ವೆ ನಂ.12/4ಕ್ಕೆ ಹೋಗಿಲ್ಲ ಎಂದು ನುಡಿಯುತ್ತಾರೆ.

2. ನಿಪಿ.2ರ ಪಂಚರಿಗೆ ಲಿಖಿತವಾಗಿ ನೋಟಿಸ್ ನೀಡಿರಲಿಲ್ಲ. ನಿಪಿ.2ರ ವೇಳೆಗೆ ಎಷ್ಟು ಜನ ಸೇರಿದ್ದರು ಎಂದು ಹೇಳಲಾಗುವುದಿಲ್ಲ. ಚಾಸಾ.3 ರಿಂದ 5 ರವರು ಚಾಸಾ.1 ರವರ ಸಂಬಂಧಿಕರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಿಪಿ.2ರ ಸ್ಥಳದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ತನಗೆ ನೆನಪಿಲ್ಲವೆಂದು ನುಡಿಯುತ್ತಾರೆ. ನಿಪಿ.2ನ್ನು ಠಾಣೆಯಲ್ಲಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1ರ ಬರವಣಿಗೆ ಯಾರದ್ದು ಎಂದು ಮರೆತಿದ್ದೇನೆ. ನಿಪಿ.2ನ್ನು ಬರೆಯುವ ವೇಳೆಗೆ ನಮ್ಮ ಒಬ್ಬ ಸಿಬ್ಬಂದಿ ಇದ್ದು, ಅವರ ಹೆಸರನ್ನು ಮರೆತಿದ್ದೇನೆ. ಸರ್ವೆ ನಂ.12/4ರ ಪಹಣಿಯನ್ನು ನೀಡಿದವರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ. ನಿಪಿ.1ರಲ್ಲಿ ತಿಳಿಸಿರುವತೆ ಯಾವುದೇ ಘಟನೆ ನಡೆಯದೇ ಇದ್ದರೂ ಚಾಸಾ.1 ರವರು ನೀಡಿದ ಸುಳ್ಳು ದೂರನ್ನು ಪಡೆದು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್